

ಒರಿ ಬಡ ಬೆರಮಾನೆ ಕಾಡ ತಾದಿಡೆ ಬೊಕ್ಕೊಂಜಿ ಊರುಗು ನಡತೊಂದು ಪೊವ್ವೊಂದು ಇತ್ತೆರ್ಗೆ , ಪೂಜೆಗ್. ತಾದಿಡೊಂಜಿ ಪಿಲಿ ಪಂಜರದುಲಾಯಿ ತಿಕ್ ಬೂರ್ದು ಇತ್ಂಡ್. ಆ ಪಿಲಿ ಇ ಬ್ಯಾನನ್ ತೂಂಡು, ಇ ಬ್ಯಾನೆ ಆ ಪಿಲಿನ್ ತೂಂಡು. ಪಿಲಿ ಬ್ಯಾನನ್ ಲೆತ್ತ್ ದ್ "ಒ ಪುನ್ಯಾತ್ಮ, ಒರ ಎನನ್ ಮುಲ್ತು ಬುಡುಪಾಲ, ನಿಕ್ಕ್ ದೇವಸ್ಥಾನ ಕಟಿನ ಪುನ್ಯ ಬರ್ಪುಂಡು" ಪಂದ್ ದಮ್ಮಯ್ಯ ದಕ್ಕಯ್ಯ ಪಾಡ್ಂಡ್. ದುಂಬುಡು ಮಸ್ತ್ ಬ್ಯಾನೆರ್ ಸತ್ಯವಂತೆರ್, ಪರೋಪಕಾರಿಲು ಆದ್ ಇತ್ತೆರ್. ಪಾಪ ಪುನ್ಯ ತೂದು, ಪಂಜರದ ಕಡಿಗೆತ್ತ್ ದ್ ಬಾಕಿಲ್ ದೆರ್ತ್ಂಡ್ ಬ್ಯಾನೆ. ಪಿದಾಯಿ ಬತ್ತಿನ ಪಿಲಿ ಬ್ಯಾನಡ "ಮೂಜಿ ದಿನೊಡ್ಡಿಂಚಿ ಇ ಪಂಜರದ ಉಲಾಯಿ ಉಲ್ಲೆ, ಬಡವುಡು ಕಣ್ಣ್ ತೋಜುಜಿ, ಯಾನ್ ನಿನನ್ ಇತ್ತೆನೆ ಬಿಚ್ಚ ತಿನ್ಪೆ" ಪಂದ್ ಬಾಯಿ ಅಂಗಂಡ್. ಬ್ಯಾನೆ ಬುಲಿಪರೆ ಸುರು ಮಲ್ತ್ಂಡ್. "ಅಯ್ಯಾ ಮಾರಾಯ, ಉಪಕಾರೊಗು ಪ್ರತೀ ಉಪಕಾರ ಮಲ್ಪೊಡು ಇ ಲೋಕೊಗು, ಅವು ಬುಡ್ದ್ ಉಪಕಾರ ಮಲ್ತಿನಾಯನೇ ತಿನ್ಪೆ ಪನ್ಪ, ಉಂದು ಅನ್ಯಾಯ,

ನಿಕ್ಕ ಘೋರ ಪಾಪ ತಟ್ಟುಂಡು, ರೌರವ ನರಕೊಗು ಪೋಪ, ಬರ್ಪಿನ ಏಲೇಲ್ ಜನ್ಮೊಡುಲಾ ನಿನ್ನ ಪಾಪ ಮಾರ್ಜನೆ ಆಪುಜಿ" ಪಂದ್ ಶಾಸ್ತ್ರ, ಪುರಾಣ ಪಂಡ್ ಬ್ಯಾನೆ. ಐಕ್ ಪಿಲಿ "ಪಾಪ ಪುನ್ಯ ಜೀವ ಬದ್ಕ್ ದ್ ಒರಿಂಡ, ನಿನನ್ ತಿನ್ಪಿನಿ ತಿನ್ಪಿನೇ" ಪಂದ್ ಬ್ಯಾನನ ವಾಂಟೆ ನಾಲಿಗ್ ಬಾಯಿ ಪಾಡರೆ ಪೋನಗ ಒಂಜಿ ಕುದುಕೆ "ದಾದಯ ಅಲ್ಪ ನಿಗಲೆನ ಗಲಾಟೆ" ಪಂಡ್. ಅಪಗ ಬ್ಯಾನೆ ನಡತಿನ ಪೂರಾ ಸಂಗತಿ ಪಂಡ್ ಬುಲಿತೊಂದು ಬುಲಿತೊಂದು. ಐಕ್ ಕುದುಕೆ ಕಿಟಿ ಕಿಟಿ ಕಿಟಿ ತೆಲಿಪುಂಡು. ಅಪಗ ಬ್ಯಾನೆ ಕೋಪೊಡು "ಎನ್ನ ಜೀವನ್ಮರಣದ ಪ್ರಶ್ನೆ, ನಿಕ್ಕ ಹಾಸ್ಯಾಸ್ಪದ ತೋಜುಂಡಾ" ಪಂಡ್. ಕುದುಕೆ ಪನ್ಪುಂಡು "ಅಂದೇ ಬಟ್ರೆ, ಉಂದು ಕಟ್ಟ್ ಕತೆ ಪನರೆ ಯಾನೇ ತಿಕಿನ ಇರೆಗ್? ಯಾನ್ ಮಂಗೆ ಅತ್ತ್, ಕುದುಕೆ. ಗಾದೆ ಪಂಡಿಲಕ್ಕ, ಕಳು (ಸುಲ್ಲು) ಪನ್ಪಿನಾಯಡ್ಡ್, ಕಲಿ ಪರ್ಪಿನಾಯೆ ಆವೊಲಿಗೆ" ಪಂಡ್. ಬ್ಯಾನಗ್ ಕುಡ ಆತ್ ಗರ್ವ ಬತ್ತ್ಂಡ್ "ವೇದ ಪಠಣ ಮಲ್ದಿನ ಇ ನಾಲಾಯಿಡ್ ಅನೃತ (ಸುಲ್ಲು) ಬರಂದ್, ಯಾನ್ ಪಂಡಿನ ಸುಲ್ಲು ಆಂಡಾ ಎನ್ನ ನಾಲಾಯಿನ್ ಸಿಗಿತೊಂಬೆ, ಕೇನ್ ಆ ಪಿಲಿಟ ಸತ್ಯನ ಸುಲ್ಲಾ ಪಂದ್" ಪಂಡ್. ಐಕ್ ಪಿಲಿ "ಅಂದಂದ್, ಆಯೆ ಪಂಡಿನವ್ವು ಸತ್ಯ" ಪಂಡ್.

ಕುದುಕೆ ಕುಡ ಆತ್ ತೆಲಿತ್ ತೆಲಿತ್ ದ್ "ಇರ್ವೆರಪ್ಪ ಸೇರೊಂದು ಎನನ್ ಮಂಗಕೋಲ ಕಟ್ಟಾವೊಂದು ಉಲ್ಲರಾ? ಒವ್ವು ಸತ್ಯ, ಆತ್ ಕಿನ್ಯ ಪಂಜೊರೊಡು, ಇತ್ ಮಲ್ಲ ಪಿಲಿ? ನಂಬುನ ಕತೆ ಪನೊಡು" ಪಂಡ್. ಕೇಂದ್ ಪಿಲಿ ಬೆಚ್ಚಾಂಡ್ "ಬೋಡಾಂಡ ಇ ಕಣ್ಣಾರೆ ತೂಲ" ಪಂದ್ ಪಂಜರದ ಉಲಾಯಿ ಪೊಗ್ಗುಂಡು. ಕುದುಕೆ ಬಾಕಿಲ್ ಪಾಡ್ದ್ "ಇಂಚ ಬಾಕಿಲ್ ಮುಚಿದ್ ಇತ್ಂಡಾ?" ಪಂಡ್. ಪಿಲಿ ಅಂದ್ ಪಂಡ್, ಕುದುಕೆ ಕಡಿ ತಿಕ್ಕಂಡ್ "ಇಂಚ ಕಡಿ ತಿಕ್ಕದ್ ಇತ್ತ್ಂಡಾ?" ಪಂಡ್. ಪಿಲಿ ಅಂದ್ ಅಂದ್ ಪಂಡ್. "ಓ, ಇತ್ತೆ ನಂಬಿಯೆ, ಇರ್ವೆರ್ಲಾ ಸತ್ಯವಂತೆರ್" ಪಂದ್ ಕುದುಕೆ ಬ್ಯಾನಗ್ "ಇರ್ ಬಟ್ರು ಪಿದಾಡ್ಲೆ ಅಶನಂಪರೆಗ್" ಪಂಡ್. ಪಿಲಿ "ಒಯ್ ಒಯ್ ಎನನ್ ಬುಡಿ" ಪಂದ್ ಗೂರ್ಂಡ್. ಕುದುಕೆಲಾ ಬ್ಯಾನೆಲಾ ಲಕೊಂದು ಪೋಯಿಡ್ದೆರ್. ಜಾಣ್ಮೆಡ್ ಉಪಕಾರ ಮಲ್ಪುಲೆ ಪನ್ಪಿನ ನೀತಿನ್ ಈ ಕತೆ ಪನ್ಪುಂಡು.



ಒಬ್ಬಾತ ಬಡ ಬ್ರಾಹ್ಮಣ ಕಾಡ ಹಾದಿಯಲ್ಲಿ ಮತ್ತೊಂದು ಊರಿಗೆ ನಡೆದುಕೊಂಡು ಹೋಗುತ್ತಿದ್ದ, ಪೂಜೆಗೆ. ಹಾದಿಯಲ್ಲೊಂದು ಹುಲಿ ಪಂಜರದೊಳಗೆ ಸಿಕ್ಕಿ ಬಿದ್ದಿತ್ತು. ಆ ಹುಲಿ ಈ ಹಾರುವನನ್ನು ನೋಡಿತು, ಈ ಹಾರುವ ಆ ಹುಲಿಯನ್ನು ನೋಡಿದ. ಹುಲಿ ಬ್ರಾಹ್ಮಣನನ್ನು ಕರೆದು "ಓ ಪುಣ್ಯಾತ್ಮ, ಒಮ್ಮೆ ನನ್ನನ್ನು ಇಲ್ಲಿಂದ ಬಿಡಿಸು, ನಿನಗೆ ದೇವಸ್ಥಾನ ಕಟ್ಟಿದ ಪುಣ್ಯ ಬರುತ್ತದೆ" ಎಂದು ದಮ್ಮಯ್ಯ ದಕ್ಕಯ್ಯ ಅಂತ ಅಂಗಲಾಚಿತು. ಹಿಂದಿನ ಕಾಲದ ಬ್ರಾಹ್ಮಣರು ತುಂಬಾ ಸತ್ಯವಂತರೂ, ಪರೋಪಕಾರಿಗಳೂ ಆಗಿದ್ದರು. ಹುಲಿಯ ಮೇಲೆ ಕರುಣೆ ಹುಟ್ಟಿ, ಪಂಜರದ ಬಾಗಿಲು ಎತ್ತಿದ ಬ್ರಾಹ್ಮಣ. ಪಂಜರದಿಂದ ಹೊರಗೆ ಬಂದ ಹುಲಿ, ಬ್ರಾಹ್ಮಣನಿಗೆ "ಮೂರುದಿನದಿಂದ ಈ ಪಂಜರದ ಒಳಗೆ ಇದ್ದೇನೆ, ಹಸಿವಿನಿಂದ ಕಣ್ಣು ಕಾಣದಂತೆ ಆಗಿದೆ. ನಾನೀಗಲೇ ನಿನ್ನನ್ನು ಸೀಳಿ ತಿನ್ನುತ್ತೇನೆ" ಎಂದು ದೊಡ್ಡದಾಗಿ ಬಾಯಿ ತೆರೆಯಿತು. ಬ್ರಾಹ್ಮಣ ಅಳಲು ಪ್ರಾರಂಭಿಸಿದ. "ಅಯ್ಯಾ ಮಹರಾಯ,

ಉಪಕಾರಕ್ಕೆ ಪ್ರತ್ಯುಪಕಾರ ಮಾಡಬೇಕು ಈ ಲೋಕದಲ್ಲಿ, ಅದುಬಿಟ್ಟು ಉಪಕಾರಮಾಡಿದವನನ್ನೇ ತಿನ್ನುತ್ತೇನೆ ಎನ್ನುತ್ತಿರುವೆ. ಇದು ಅನ್ಯಾಯ, ನಿನಗೆ ಘೋರ ಪಾಪ ತಟ್ಟುತ್ತದೆ, ರೌರವ ನರಕಕ್ಕೆ ಹೋಗುತ್ತಿಯಾ, ಮುಂದಿನ ಏಳೇಳು ಜನ್ಮದಲ್ಲೂ ನಿನ್ನ ಪಾಪ ಪರಿಹಾರ ಆಗದು" ಎಂದು ಶಾಸ್ತ್ರ, ಪುರಾಣ ಹೇಳಿದ ಬ್ರಾಹ್ಮಣ. ಅದಕ್ಕೆ ಹುಲಿ "ಪಾಪ ಪುಣ್ಯ ಎಲ್ಲಾ ಬದುಕಿ ಉಳಿದರೆ, ನಿನ್ನನ್ನು ತಿನ್ನುವುದು ತಿನ್ನುವುದೆ" ಎಂದು ಬ್ರಾಹ್ಮಣನ ಕಂಠನಾಳಕ್ಕೆ ಬಾಯಿ ಹಾಕಲು ಹೋದಾಗ "ಏನದು ಅಲ್ಲಿ ನಿಮ್ಮ ಗಲಾಟೆ?" ಎಂದಿತು ಒಂದು ನರಿ. ಆಗ ಬ್ರಾಹ್ಮಣ ಅಳುತ್ತಾ ಅಳುತ್ತಾ ನಡೆದ ಎಲ್ಲಾ ಸಂಗತಿಗಳನ್ನೂ ಹೇಳಿದ. ಅದಕ್ಕೆ ನರಿ ಕಿಲಕಿಲನೆ ನಕ್ಕಿತು. ಆಗ ಬ್ರಾಹ್ಮಣ ಕೋಪದಿಂದ "ನನ್ನ ಜೀವನ್ಮರಣದ ಪ್ರಶ್ನೆ, ನಿನಗೆ ಹಾಸ್ಯಾಸ್ಪದವಾಗಿ ಕಾಣುತ್ತದೆಯೋ?" ಎಂದ. ನರಿ ಹೇಳಿತು "ಹೌದೇ ಭಟ್ರೆ, ಈ ಕಟ್ಟುಕತೆ ಹೇಳಲು ನಾನೇ ಸಿಕ್ಕಿದ್ದಾ ನಿಮಗೆ? ನಾನು ಮಂಗನಲ್ಲ, ನರಿ. ಗಾದೆ ಮಾತಿನಂತೆ ಸುಳ್ಳು ಹೇಳುವವನಿಗಿಂತ ಕಳ್ಳು ಕುಡಿಯುವವ ಲೇಸಂತೆ" ಎಂದಿತು. ಬ್ರಾಹ್ಮಣ ಇನ್ನಷ್ಟು ಕೋಪೋದ್ರಿಕ್ತನಾದ "ವೇದ ಪಠಣ ಮಾಡಿದ ಈ ನಾಲಗೆಯಿಂದ ಅನೃತ (ಸುಳ್ಳು)ಬಾರದು, ನಾನು ಹೇಳಿದ್ದು ಸುಳ್ಳಾದರೆ, ನನ್ನ ನಾಲಿಗೆಯನ್ನು ಸೀಳಿಕೊಳ್ಳುವೆ, ಕೇಳು ಆ ಹುಲಿಯನ್ನು ನಾನು ಹೇಳಿದ್ದು ಸತ್ಯವಾ, ಸುಳ್ಳಾ ಎಂದು". ಅದಕ್ಕೆ ಹುಲಿ "ಹೌದೌದು, ಆತ ಹೇಳಿದ್ದು ಸತ್ಯ" ಎಂದಿತು. ನರಿ ಇನ್ನಷ್ಟು ನಕ್ಕು ನಕ್ಕು "ಇಬ್ಬರೂ ಸೇರಿಕೊಂಡು ನನ್ನನ್ನು ಮಂಗಕೋಲ ಕಟ್ಟಿಸುತ್ತಾ ಇದ್ದಿರಾ? ಯಾವುದು ಸತ್ಯ, ಅಷ್ಟು ಸಣ್ಣ ಪಂಜರದಲ್ಲಿ ಇಷ್ಟು ದೊಡ್ಡ ಹುಲಿ? ಯಾರಾದರೂ ನಂಬುವ ಕತೆ ಹೇಳಬೇಕು" ಅಂದಿತು. ಇದನ್ನು ಕೇಳಿ ಹುಲಿ ಸಿಟ್ಟಿಗೆದ್ದಿತು "ಬೇಕಾದರೆ ನೀನು ಕಣ್ಣಾರೆ ನೋಡು" ಎಂದೇಳಿ, ಪಂಜರದ ಒಳಗೆ ಹೊಕ್ಕಿತು. ನರಿ ಬಾಗಿಲು ಮುಚ್ಚಿ "ಹೀಗೆ ಬಾಗಿಲು ಮುಚ್ಚಿತ್ತೇ?" ಎಂದಿತು. ಹುಲಿ ಹೌದೆಂದಿತು, ನರಿ ಚಿಲಕ ಹಾಕಿ "ಹೀಗೆ ಚಿಲಕ ಹಾಕಲಾಗಿತ್ತೇ?" ಅಂತ ಕೇಳಿತು. ಹುಲಿ ಹೌದೌದು ಎಂದಿತು. "ಓ ಈಗ ನಂಬಿದೆ, ನೀವೀರ್ವರೂ ಸತ್ಯವಂತರೆಂದು" ಅಂತ ಹೇಳಿ ನರಿ ಬ್ರಾಹ್ಮಣನಿಗೆ

“ತಾವು ಭಟ್ರು, ಹೊರಡಿ ಅಶನ (ಊಟ)ಕ್ಕೆ” ಎಂದಿತು. ಹುಲಿ “ಓಯ್ ಓಯ್ ನನ್ನನ್ನು ಬಿಡಿ ಹೊರಕ್ಕೆ” ಅಂತ ಗರ್ಜಿಸಿತು. ನರಿಯೂ, ಬ್ರಾಹ್ಮಣನೂ ಎದ್ದು ಹೋಗಿಬಿಟ್ಟರು, ತಮ್ಮ ತಮ್ಮ ದಾರಿ ಹಿಡಿದುಕೊಂಡು. "ಜಾಣ್ಮೆಯಿಂದ ಉಪಕಾರ ಮಾಡು ಎಂಬ ನೀತಿಯನ್ನು ತಿಳಿಸುತ್ತದೆ."



A poor Brahmin was walking through a forest to another village for a prayer ritual. On the way, he saw a tiger trapped in a cage. The tiger saw him and begged, “Oh kind man, please let me out! If you free me, you will get great merit.”

The Brahmin felt sorry for the tiger because people in those days were very honest and kind. So he opened the cage.

As soon as the tiger came out, it said, “I’ve been starving in this cage for three days. I’m so hungry that I can’t see straight. I’m going to eat you right now,” and opened its big mouth.

The Brahmin started crying. He said,

“How can you harm the person who helped you? That is wrong. You will get terrible sin for this.”
But the tiger said, “I don’t care about sin or merit. I just want to survive,” and moved closer to attack him.
At that moment, a fox came by and asked, “What is all this noise?” The Brahmin, still crying, explained everything that had happened.
Hearing the Brahmin’s story, the fox burst into laughter.
The Brahmin got angry and said, “This is a matter of life and death for me. Do you find it funny?”
The fox replied, “Really, priest? You expect me to believe such a story? I’m a fox, not a fool.

There’s a saying: better a drunkard than a liar! Your story sounds like a lie.”
The Brahmin became even more upset. “I recite the Vedas. My tongue never speaks lies. If I am lying, I will cut off my tongue! Ask the tiger itself whether I am telling the truth.”
The tiger immediately said, “Yes, yes, what he said is true.”
The fox laughed even harder. “So both of you are trying to make a fool out of me? How can such a big tiger fit in such a small cage? You should at least make up a believable story!”
The tiger grew angry. “If you don’t believe it, I will show you. Look!” and it went back inside the cage.

The fox quickly shut the cage door and said, “Was this how the door closed?”

The tiger said, “Yes.”

Then the fox slid the latch and asked, “And was this how the latch was locked?”

The tiger again said, “Yes, yes.”

The fox said, “Ah, now I believe both of you were telling the truth,” and then turned to the Brahmin and said, “Priest, you may go now and have your meal in peace.”

The tiger roared, “Hey! Let me out! Let me out!”

But the fox and the Brahmin walked away, each going their own way.

“The moral of the story is to help wisely.”